ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
10
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE 15-2-21

## ರೈತರ ಪ್ರತಿಭಟನೆ ಕುರಿತ ಟೂಲ್‌ಕಿಟ್ ಎಡಿಟ್ ಮಾಡಿದ್ದ ಆರೋಪ

## ಬೆಂಗಳೂರಿನ ದಿಶಾ ರವಿ ಬಂಧನ | ಐದು ದಿನಗಳ ಕಾಲ ಪೊಲೀಸ್ ವಶಕ್ಕೆ

# ಟೂಲ್‌ಕಿಟ್‌ಗೆ ಟ್ವಿಸ್ಟ್

ನವದೆಹಲಿ: ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧದ ರೈತರ ಪ್ರತಿಭಟನೆ ಹಾಗೂ ಜಾಗತಿಕ ಪರಿಸರ ಹೋರಾಟಗಾರ್ತಿ ಗ್ರೆಟಾ ಥನ್‌ಬರ್ಗ್ 'ಟೂಲ್‌ಕಿಟ್' ಪ್ರಕರಣ ಇದೀಗ ಹೊಸ ತಿರುವು ಪಡೆದಿದ್ದು, ಬೆಂಗಳೂರಿನ ಚಿಕ್ಕಬಾಣಾವರ ನಿವಾಸಿ 21 ವರ್ಷದ ದಿಶಾ ರವಿ ಎಂಬುವರನ್ನು ದೆಹಲಿ ಪೊಲೀಸರ ಸೈಬರ್ ಘಟಕವು ಬಂಧಿಸಿದೆ.

ಗ್ರೆಟಾ ಥನ್‌ಬರ್ಗ್ ಇತ್ತೀಚೆಗೆ ಟ್ವಿಟರ್‌ನಲ್ಲಿ ಅಪ್‌ಲೋಡ್ ಮಾಡಿದ್ದ 'ಟೂಲ್‌ಕಿಟ್ ಗೂಗಲ್ ಡಾಕ್ಯುಮೆಂಟ್'ಗೆ ಬೆಂಗಳೂರಿನ ಯುವತಿಯೇ ತಿದ್ದುಪಡಿ ತಂದಿದ್ದಳು ಎಂಬ ಮಾಹಿತಿ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ದಿಶಾರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಷ್ಟೇ ಅಲ್ಲದೆ, ಈ ಪ್ರಕರಣಕ್ಕೆ ಸಂಬಂಧಿಸಿದ ಅನೇಕ ಆಘಾತಕಾರಿ ಮಾಹಿತಿಯನ್ನೂ ಪೊಲೀಸರು ಬಹಿರಂಗಪಡಿಸಿದ್ದಾರೆ. ಈ ಯುವತಿ ಖಲಿಸ್ತಾನ್ ಸಂಘಟನೆಗಳ ಜತೆ ನಿಕಟ ಸಂಪರ್ಕ ಹೊಂದಿದ್ದಳು ಎಂದು ಪೊಲೀಸರು ಹೇಳಿದ್ದಾರೆ.

**5 ದಿನ ಪೊಲೀಸ್ ವಶಕ್ಕೆ:** ರೈತರ ಪ್ರತಿಭಟನೆಗೆ ಸಂಬಂಧಿಸಿದ ಟೂಲ್‌ಕಿಟ್ ಯಾವ ಖಾತೆಯಿಂದ ರವಾನೆಯಾಗಿದೆ ಎಂಬ ಬಗ್ಗೆ ಮತ್ತು ಆ ಖಾತೆಯ ಚಟುವಟಿಕೆ ಕುರಿತು ಮಾಹಿತಿ ನೀಡುವಂತೆ ಕಳೆದ ವಾರ ಪೊಲೀಸರು ಗೂಗಲ್ ಸೇರಿದಂತೆ ಸಾಮಾಜಿಕ ಜಾಲತಾಣಗಳಿಗೆ ಪತ್ರ ಬರೆದಿದ್ದರು. ಆ ಸಂಸ್ಥೆಗಳು ನೀಡಿದ ಮಾಹಿತಿಯ ಆಧಾರದಲ್ಲಿ ಶನಿವಾರ ಸಂಜೆ 6 ಗಂಟೆಗೆ ದಿಶಾರನ್ನು ಬೆಂಗಳೂರಿನ ಅವರ ಮನೆಯಿಂದಲೇ ಬಂಧಿಸಿ ಕರೆದೊಯ್ದ ದೆಹಲಿ ಪೊಲೀಸರು, ತಡರಾತ್ರಿ ಆಕೆಯ ಬಂಧನದ ವಿಚಾರ ಹೊರಹಾಕಿದ್ದಾರೆ. ಭಾನುವಾರ ಅವರನ್ನು ಕೋರ್ಟ್‌ಗೆ ಹಾಜರುಪಡಿಸಲಾಗಿದ್ದು, 5 ದಿನಗಳ ಕಾಲ ಪೊಲೀಸ್ ವಶಕ್ಕೊಪ್ಪಿಸಿ ನ್ಯಾಯಾಲಯ ಆದೇಶ ಹೊರಡಿಸಿದೆ.



## ಯಾರೀ ದಿಶಾ ರವಿ?

ದಿಶಾ ರವಿ(21) ಅವರು ಬೆಂಗಳೂರಿನ ಖಾಸಗಿ ಕಾಲೇಜಿನಲ್ಲಿ ಪದವಿ ಪಡೆದಿದ್ದು, ಪ್ರಸ್ತುತ ಸಸ್ಯಾಧಾರಿತ ಆಹಾರ ತಯಾರಿಕಾ ಕಂಪನಿಯೊಂದರಲ್ಲಿ ಕ್ಯುಲಿನರಿ ಎಕ್ಸ್‌ಪೀರಿಯೆನ್ಸ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜಾಗತಿಕ ಪರಿಸರ ಹೋರಾಟಗಾರ್ತಿ ಗ್ರೆಟಾ ಥನ್‌ಬರ್ಗ್ ಅವರಿಂದ ಪ್ರೇರಣೆ ಪಡೆದು, ಹವಾಮಾನ ವೈಪರೀತ್ಯದ ವಿರುದ್ಧ ಜಾಗೃತಿ ಮೂಡಿಸುವ ಕೆಲಸವನ್ನೂ ದಿಶಾ ಮಾಡುತ್ತಿದ್ದರು. ಜತೆಗೆ, ವಿವಿಧ ಯುವಜನ ಆಧಾರಿತ ಪರಿಸರ ಸಂಘಟನೆಗಳಲ್ಲೂ ಸಕ್ರಿಯವಾಗಿ ಭಾಗಿಯಾಗುತ್ತಿದ್ದರು. ಪರಿಸರ ಸಂರಕ್ಷಣೆಗಾಗಿ ರೂಪಿಸಲ್ಪಟ್ಟ 'ಫ್ರೈಡೆ ಫಾರ್ ಫ್ಯೂಚರ್' ಎಂಬ ಕ್ಯಾಂಪೇನ್‌ನ ಸ್ಥಾಪಕರಲ್ಲಿ ದಿಶಾ ಕೂಡ ಒಬ್ಬರು.

## ಕೋರ್ಟ್‌ನಲ್ಲಿ ಕಣ್ಣೀರಿಟ್ಟ ದಿಶಾ

ಭಾರತ ಸರ್ಕಾರದ ವಿರುದ್ಧದ ದೊಡ್ಡ ಸಂಚಿನಲ್ಲಿ ಆಕೆ ಭಾಗಿಯಾಗಿದ್ದು, ಖಲಿಸ್ತಾನಿ ಪ್ರತ್ಯೇಕತಾವಾದಿಗಳೊಂದಿಗೆ ನಂಟು ಹೊಂದಿದ್ದಾರೆ ಎಂದು ಸರ್ಕಾರಿ ವಕೀಲರು ಕೋರ್ಟ್‌ನಲ್ಲಿ ವಾದಿಸುತ್ತಿದ್ದಂತೆ, ದಿಶಾ ಕಣ್ಣೀರಿಟ್ಟಿದ್ದಾರೆ. 'ನಾನು ಯಾವುದೇ ಸಂಚು ರೂಪಿಸಿಲ್ಲ, ಯಾವ ಸಂಚಿನ ಭಾಗವೂ ಆಗಿಲ್ಲ. ನನಗೆ ಅಂಥ ಯಾವುದೇ ಸಂಘಟನೆ ಗೊತ್ತಿಲ್ಲ. ರೈತರೇ ನಮ್ಮ ಭವಿಷ್ಯ, ಅವರು ನಮಗೆ ಅನ್ನ ನೀಡುವವರು ಎಂಬ ಕಾರಣಕ್ಕಾಗಿ ನಾನು ಕೇವಲ ಅನ್ನದಾತರಿಗೆ ಬೆಂಬಲ ನೀಡುತ್ತಿದ್ದೆ. ಆ ಟೂಲ್‌ಕಿಟ್ ಸೃಷ್ಟಿಸಿದ್ದು ನಾನಲ್ಲ. ನಾನು ಫೆ.3ರಂದು ಟೂಲ್‌ಕಿಟ್‌ನಲ್ಲಿ ಎರಡು ತಿದ್ದುಪಡಿಗಳನ್ನು ತಂದಿದ್ದೆ ಅಷ್ಟೆ' ಎಂದು ಹೇಳಿದ್ದಾರೆ.

[illegible] ≫6

## ಪೊಲೀಸರ ಆರೋಪಗಳೇನು?

1 ಟೂಲ್‌ಕಿಟ್‌ಗೆ ತಿದ್ದುಪಡಿ ತಂದವರಲ್ಲಿ ಹಾಗೂ ಅದರ ಸಿದ್ಧತೆ ಮತ್ತು ಹಂಚುವಿಕೆಯ ಪ್ರಮುಖ ಸಂಚುಕೋರರಲ್ಲಿ ದಿಶಾ ಕೂಡ ಒಬ್ಬರು.

2 ಭಯೋತ್ಪಾದಕ ಗುರುಪತ್ವಂತ್ ಸಿಂಗ್ ಪನ್ನು ಮತ್ತು ಪೊಯೆಟಿಕ್ ಜಸ್ಟೀಸ್‌ನಂತಹ ಖಲಿಸ್ತಾನಿ ಸಂಘಟನೆಯಿಂದ ದಿಶಾ ಪ್ರಭಾವಿತರಾಗಿದ್ದರು

3 ಭಾರತದ ವಿರುದ್ಧ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪ್ರಾದೇಶಿಕ ಯುದ್ಧ ಸಾರುವುದು ಇವರ ಉದ್ದೇಶವಾಗಿತ್ತು

4 ದಿಶಾ ಅವರೇ ವಾಟ್ಸ್‌ಆ್ಯಪ್ ಗ್ರೂಪ್ ರಚಿಸಿ, ಟೂಲ್‌ಕಿಟ್ ರಚನೆಗೆ ಆ ಗುಂಪಿನ ಸದಸ್ಯರ ನೆರವನ್ನೂ ಪಡೆದಿದ್ದಾರೆ

5 ಇದರ ರಚನಾ ಪ್ರಕ್ರಿಯೆಯಲ್ಲಿ ಆ ಗ್ರೂಪ್‌ನಲ್ಲಿದ್ದ ಎಲ್ಲರಿಗೂ ಖಲಿಸ್ತಾನ ಪರ ಪೊಯೆಟಿಕ್ ಜಸ್ಟೀಸ್ ಫೌಂಡೇಶನ್ ಸಹಭಾಗಿತ್ವ ನೀಡಿತ್ತು

6 ಆರಂಭದಲ್ಲಿ ದಿಶಾ ಅವರೇ ಥನ್‌ಬರ್ಗ್ ಜತೆ ಟೂಲ್‌ಕಿಟ್ ಹಂಚಿಕೊಂಡಿದ್ದರು. ನಂತರ ಅದರಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕಿದೆ ಎಂದು ಹೇಳಿ, ಪರಿಷ್ಕೃತ ಟೂಲ್‌ಕಿಟ್ ನೀಡಿದ್ದರು

7 ಈ ಸಂಚಿನಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದು ತನಿಖೆ ಮುಂದುವರಿಯಲಿದೆ

ತಿಳಿ ಸಾರ


# ಟೂಲ್‌ಕಿಟ್ ಎಂದರೇನು?

**■ ಕಳೆದ ಒಂದು ವಾರದಿಂದ ಟೂಲ್ ಕಿಟ್, ಟೂಲ್ ಕಿಟ್ ಅಂತ ಓದ್ತಾ ಇದ್ದೇವೆ, ಹಾಗಂದ್ರೆ ಏನು?**

ಸರಳವಾಗಿ ಹೇಳುವುದಾದರೆ, ಚಳವಳಿ ಅಥವಾ ಹೋರಾಟ ನಡೆಸುವವರಿಗೆ ಮಾರ್ಗದರ್ಶಿ ಸೂತ್ರ ಇದ್ದ ಹಾಗೆ. ಯಾವಾಗ ಮತ್ತು ಹೇಗೆ ಪ್ರತಿಭಟನೆ ಮಾಡಬೇಕು ಎಂದು ಮೊದಲೇ ರೂಪಿಸುವ ಒಂದು ಪುಟ್ಟ ಕೈಪಿಡಿ ಇದಾಗಿರುತ್ತದೆ.

**■ ಹಿಂದೆಯೂ ಇತ್ತಾ? ಹೊಸತಾ?**

ದಶಕಗಳಿಂದಲೂ ಇಂಥ ಟೂಲ್‌ಕಿಟ್‌ಗಳ ಪ್ರಸ್ತಾಪ ಇದೆ. 2011ರಲ್ಲಿ ವಾಲ್‌ಸ್ಟ್ರೀಟ್ ಪ್ರತಿಭಟನೆ, 2019ರಲ್ಲಿ ಹಾಂಕಾಂಗ್ ಪ್ರತಿಭಟನೆಗಳಲ್ಲೆಲ್ಲ ಇಂಥ ಟೂಲ್‌ಕಿಟ್ ಬಳಸಲಾಗಿತ್ತು. ಈಗ ಸಾಮಾಜಿಕ ಜಾಲತಾಣ ಪ್ರಬಲವಾಗಿರುವುದರಿಂದ ಹೆಚ್ಚು ಜನಕ್ಕೆ ತಿಳಿಯುತ್ತಿದೆಯಷ್ಟೇ.



**■ ಟೂಲ್‌ಕಿಟ್‌ನಲ್ಲೇನಿರುತ್ತದೆ?**

ಪ್ರತಿಭಟನಾಕಾರರು ಏನು ಮಾಡಬೇಕು ಎನ್ನುವ ಗೈಡ್ ಇದು. ಉದಾ: ಹಾಂಕಾಂಗ್‌ನಲ್ಲಿ ಪ್ರತಿಭಟನೆ ಸಂದರ್ಭ ಮುಖವಾಡ, ಶಿರಸ್ತ್ರಾಣ ಬಳಸಿ ಎಂದು ಇಂಥ ಟೂಲ್‌ಕಿಟ್‌ನಲ್ಲಿ ಸೂಚಿಸಲಾಗಿತ್ತು. ಭಾರತದಲ್ಲಿ ಸಿಎಎ ವಿರುದ್ಧ ನಡೆದ ಪ್ರತಿಭಟನೆಯ ಸಂದರ್ಭ ಟ್ವಿಟರ್‌ನ್ನು ಸಮರ್ಪಕವಾಗಿ ಬಳಸಿಕೊಳ್ಳಿ ಎಂದು ಟೂಲ್‌ಕಿಟ್ ಸಲಹೆ ನೀಡಿತ್ತು.

**■ ಈಗ ಹುಟ್ಟಿಕೊಂಡಿರುವ ಗ್ರೇಟಾ ಥನ್‌ಬರ್ಗ್ ಟೂಲ್‌ಕಿಟ್ ಕತೆ ಏನು?**

ಪರಿಸರ ಹೋರಾಟಗಾರ್ತಿ, 18ರ ಹರೆಯದ ಗ್ರೇಟಾ ತಮ್ಮ ಟ್ವಿಟರ್ ಖಾತೆಯಲ್ಲಿ ಇಂಥದ್ದೊಂದು ಟೂಲ್‌ಕಿಟ್‌ನ್ನು ಶೇರ್ ಮಾಡಿದ್ದರು; ಆಮೇಲೆ ಅದನ್ನು ಡಿಲೀಟ್ ಮಾಡಿದ್ದರು. ಅದು ಭಾರತದಲ್ಲಿ ಈಗ ನಡೆಯುತ್ತಿರುವ ರೈತರ ಪ್ರತಿಭಟನೆ ಕುರಿತಾದ ಮಾರ್ಗದರ್ಶಿ ಸೂತ್ರ ಎಂದು ಹೇಳಲಾಗಿದೆ. ಅದರಲ್ಲಿ ರೈತರ ಪ್ರತಿಭಟನೆ ಯಾವಾಗ ಮತ್ತು ಹೇಗೆ ನಡೆಸಬೇಕೆಂಬ ಮಾಹಿತಿಗಳಿದ್ದವು. ಉದಾ: ಫೆ. 4, 5ರಂದು ಟ್ವಿಟರ್ ಮೂಲಕ ಅಭಿಯಾನ ನಡೆಸಬೇಕು; ಅದಾನಿ, ಅಂಬಾನಿ ವಿರುದ್ಧ ಸಿಡಿದೇಳಬೇಕು; ಫೆ. 13 ಮತ್ತು 14ರಂದು ಸ್ಥಳೀಯ ಮಟ್ಟದಲ್ಲಿ ಪ್ರತಿಭಟನೆ ನಡೆಸಬೇಕು ಎಂಬ ಮಾಹಿತಿಗಳಿದ್ದವು. ವಿವಿಧ ವೆಬ್‌ಸೈಟ್‌ಗಳ ಲಿಂಕ್‌ಗಳಿದ್ದವು.

**■ ಈಗ ಪ್ರಚಲಿತದಲ್ಲಿರುವ ಟೂಲ್‌ಕಿಟ್ ಯಾಕೆ ಇಷ್ಟೊಂದು ಪ್ರಚಾರ ಪಡೆದಿದೆ?**

ಇದರಲ್ಲೇ ಇರುವುದು ಆಸಕ್ತಿಕರ ವಿಚಾರ. ಇದರಲ್ಲಿ ಉಲ್ಲೇಖವಾದ ಹಾಗೆಯೇ ಪ್ರತಿಭಟನೆಗಳು ನಡೆಯುತ್ತಿವೆ ಎಂದು ಪೊಲೀಸರು ಹೇಳುತ್ತಾರೆ. ಜ.26ರಂದು ದಿಲ್ಲಿಯಲ್ಲಿ ನಡೆದ ಕೆಂಪುಕೋಟೆ ಮುತ್ತಿಗೆ ಸಹ ಇದರಲ್ಲಿ ಉಲ್ಲೇಖಗೊಂಡಿದ್ದು ಪೂರ್ವಯೋಜಿತವಾಗಿದೆ. ಇದು ಅಂತರರಾಷ್ಟ್ರೀಯ ಮಟ್ಟದ ಸಂಚು ಎನ್ನುವುದು ಇದರಲ್ಲೇ ರೂಪಿತವಾಗಿದೆ ಎನ್ನುವುದು ಸರ್ಕಾರದ ವಾದ. ಇದರ ಹಿಂದೆ ದೇಶವಿರೋಧಿ ಸಂಚಿದೆ. ಇದಕ್ಕೆ ಪೂರಕವಾಗಿ ಗ್ರೇಟ್ ಥನ್‌ಬರ್ಗ್ ಹಾಗೂ ಪಾಪ್ ಗಾಯಕಿ ರಿಹನ್ನಾ ಟ್ವೀಟ್ ಮಾಡಿದ್ದು ಇವೆಲ್ಲವನ್ನೂ ನಿರೂಪಿಸುತ್ತದೆ ಎಂದು ಸರ್ಕಾರ ಹೇಳಿದೆ.

**■ ಅದ್ಸರಿ, ಈಗ ಬಂಧಿತವಾಗಿರುವ ಬೆಂಗಳೂರಿನ ಹುಡುಗಿ ಪಾತ್ರ ಏನು?**

ಈಗ ಬಂಧಿತಳಾಗಿರುವ ದಿಶಾ ರವಿ ಎಂಬಾಕೆ ಫ್ರೈಡೇ ಫಾರ್ ಫ್ಯೂಚರ್ ಎಂಬ ಸಂಘಟನೆಯ ಸಂಸ್ಥಾಪಕಿಯಾಗಿದ್ದು, ಈ ಟೂಲ್‌ಕಿಟ್‌ನ್ನು ಎಡಿಟ್ ಮಾಡುತ್ತಿದ್ದಳು ಎನ್ನಲಾಗಿದೆ. ಹಾಗೆಯೇ ಇವಳಿಗೆ ಖಲಿಸ್ತಾನ ಉಗ್ರರ ನಂಟು ಇತ್ತೆನ್ನುವುದು ಪೊಲೀಸರ ತನಿಖೆಯಿಂದ ಸಾಬೀತಾಗಿದೆ.